O.S. ನಂಬರಃ 48/2014

ಡಿ. ಡಬ್ಲ್ಯೂಃ 1

ದಿಃ 06-10-2023 ರಂದು ಸಾಕ್ಷಿಯನ್ನು ಪುನ: ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ  ವಾದಿ ಪರ ಶ್ರೀ  ಎಸ್.ಎನ್.ಎಚ್. ವಕೀಲರಿಂದಃ

ನನ್ನ ಪರ ಹಾಜರುಪಡಿಸಿದ ದಾಖಲೆಗಳ ಬಗ್ಗೆ ಮಾಹಿತಿ ಇದೆ. ನಮ್ಮ ಚಿತಾವಣೆ ಮೇರೆಗೆ ನಿಡಿ-8 ರಲ್ಲಿ ವೆಂಕಪ್ಪ ಆಚಾರಿ ರವರ ಹೆಸರು ಬಂದಿದೆ ಎಂದರೆ ಸರಿಯಲ್ಲ. ನಿಡಿ-8 ಮತ್ತು 14 ರಲ್ಲಿಯ ಭೂ ನ್ಯಾಯ ಮಂಡಳಿಯ ಆದೇಶದ ನಂಬರ ಒಂದೇ ಇದೆ ಎಂದರೆ ಸರಿ. ನಿಡಿ-14 ರ ಪ್ರಕಾರ 4-ಗುಂಟೆ ವಾದಿ ಹೆಸರಿನಲ್ಲಿ ಮಂಜೂರಿ ಮಾಡುವ ಬದಲು ವೆಂಕಪ್ಪನ ಹೆಸರಿನಲ್ಲಿ ಮಂಜೂರಿ ಆಗಿದೆ ಎಂದರೆ ಸರಿ. ನಿಡಿ-16 ರ ಪ್ರಕಾರ ವಾದಿ ತಮಗೆ ಮಂಜೂರಿಯಾದ 4-ಗುಂಟೆ ಆಸ್ತಿ ಕುರಿತು ಪಟ್ಟಾ ನೀಡುವಂತೆ ಅರ್ಜಿ ನೀಡಿದ್ದಾನೆ, ಆದರೆ ನಮ್ಮ ಪ್ರಭಾವದಿಂದ ಆತನ ಹೆಸರಿನಲ್ಲಿ ರೆಕಾರ್ಡ ಆಗಿಲ್ಲ ಎಂದರೆ ಸರಿಯಲ್ಲ. ಉದ್ದೇಶಪೂರ್ವಕವಾಗಿ ವಾದಿ ವಾಸ್ತವ್ಯದ ಮನೆ ಹಾನಿ ಮಾಡಲು ಹೋಗಿದ್ದೆ ಎಂದರೆ ಸರಿಯಲ್ಲ. ವಾದಿ ಕಡೆಯಿಂದ ಹಣ ಪಡೆದು ಮನೆ ಬರೆದುಕೊಟ್ಟರೂ ಸಹ ಮನೆ ಹಾನಿ ಮಾಡಲು ಹೋಗಿದ್ದೇವು ಎಂದರೆ ಸರಿಯಲ್ಲ. ಈ ಕುರಿತು ಕ್ರಿಮಿನಲ್ ಪ್ರಕರಣವಾಗಿ ನಿಡಿ-7 ರಂತೆ ಪಂಚನಾಮೆ ಮಾಡಿದ್ದಾರೆ ಎಂದರೆ ಸರಿ.

ಭೂ ನ್ಯಾಯ ಮಂಡಳಿಯ ಆದೇಶದ ಪ್ರಕಾರ ವಾದಿಗೆ 4-ಗುಂಟೆ ಆಸ್ತಿ ಹಾಗೂ ಅದರಲ್ಲಿರುವ ಆತ ಖರೀದಿಸಿದ ಮನೆಗೆ ಹಕ್ಕುದಾರ ಎಂದರೆ ಸರಿಯಲ್ಲ. ಭೂ ನ್ಯಾಯ

ಮಂಡಳಿಯಿಂದ ಆದೇಶವಾಗಿದ್ದರೂ ಸಹ ಎರಡೆರಡೂ ಪಟ್ಟಾ ಇರುವುದನ್ನು ಮುಂದೆ ಮಾಡಿ ವಾದಿ ಹೆಸರಿನಲ್ಲಿ ರೆಕಾರ್ಡ ಬರದಂತೆ ಮಾಡಿದ್ದೇವೆ ಎಂದರೆ ಸರಿಯಲ್ಲ. ವೆಂಕಪ್ಪನಿಗೆ ಮೂರು ಗುಂಟೆ ಹಾಗೂ ವಾದಿಗೆ ನಾಲ್ಕು ಗುಂಟೆ ಜಮೀನು ಮಂಜೂರಿಯಾಗಿದೆ ಎಂದರೆ ಸರಿಯಲ್ಲ, ಸಾಕ್ಷಿ ವೆಂಕಪ್ಪನಿಗೆ ಮಾತ್ರ ನಾಲ್ಕು ಗುಂಟೆ ಮಂಜೂರಿಯಾಗಿದೆ, ಉಳಿದ ಮೂರು ಕ್ಷೇತ್ರದ ಬಗ್ಗೆ ಯಾವುದೂ ಆದೇಶವಾಗಿಲ್ಲ ಎಂದು ಹೇಳುತ್ತಾರೆ. ವಾದಿ ಕುಟುಂಬವನ್ನು ಮನೆಯಿಂದ ಬಲಾತ್ಕಾರವಾಗಿ ಹೊರ ಹಾಕಲು ಪ್ರಯತ್ನಿಸಿದ್ದಕ್ಕಾಗಿ ಈ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ಈ ಮೊದಲು ಸಹಿ ಮಾಡುತ್ತಿದ್ದರೂ ಸಹ ಜಿಪಿಎ ಹಾಗೂ ವಕಾಲತ್ ಗಳಲ್ಲಿ ಹೆಬ್ಬೆಟ್ಟು ಹಾಕಿ ಸುಳ್ಳು ಸಾಧನೆ ಮಾಡಲು ಹೊರಟಿರುತ್ತೇವೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.